

ಶಾಂತಿ ಕೆ. ಅಪ್ಪಣ್ಣ

# ಹೀಗೊಂದು ಕಥೆ

ಇದು ನನ್ನ ಕತೆ, ಅಥವಾ ಮಹ್ಮದ್ ಕುಟ್ಟಿ ಅಲಿಯಾಸ್ ನನ್ನ ಪ್ರೀತಿಯ ಬಾಲ್ಯದ ಗೆಳೆಯ ಬಾಪುಟ್ಟಿಯ ಕತೆ. ನಿಮಗೆ ಹೇಗೆ ತೋಚುವುದೋ ಹಾಗೇ ಅಂದುಕೊಳ್ಳಿ. ಇದು ನಮ್ಮೂರಿನ ಒಂದು ಕಾಲದ ಚೆಲುವೆ ಪ್ರಭಾಳ ಕತೆ ಅಥವಾ ಅವಳ ಅಪ್ಪ ಮಾಧವ ನಾಯರ್‌ನ ಕಥೆ ಅಥವಾ ಉಣ್ಣಿಯ ಕಥೆ ಅಥವಾ ನಮ್ಮೂರಿನ ಕಥೆ. ಸಾಮಾನ್ಯ ಎಲ್ಲ ಕಥೆಗಳಲ್ಲಿ ಬರುವ ಹಾಗೆ ಇಲ್ಲೂ ಒಂದೂರು ಬರುತ್ತದೆ. ಆದರೆ ಇಲ್ಲಿ ಬರುತ್ತಿರುವುದು ನನ್ನದೇ ಊರು. ನಾನು ಹುಟ್ಟಿ ಬೆಳೆದು ದೊಡ್ಡವನಾಗಿ, ಪೋಲಿಯಾಗಿ ಸುತ್ತಿ ಸುಖಪಟ್ಟ ಊರು. ಬೆಳೆದ ಒಂದು ಹಂತದಲ್ಲಿ ತನ್ನ ಅಪಾಪೋಲಿತನವನ್ನೆಲ್ಲ ಬಿಗಿದು ಊರ ಹೊಳೆಗೆ ಎಸೆದು ಬಿಗಿದ ಕಂಠದೊಂದಿಗೆ ಊರು ಬಿಟ್ಟುಹೋದೆನೆಂಬುವುದನ್ನು ಬಿಟ್ಟರೆ ಸದಾ ನನ್ನ ನೆನಪಲ್ಲಿ ನಿಂತ, ನನ್ನ ಆತ್ಮದಲಿ ಬೆರೆತ ಊರು.

ನಮ್ಮೂರ ನಡುವೆ ಒಂದು ನದಿ ಇದೆ. ಅದು ನಮ್ಮೂರನ್ನೂ ಪಕ್ಕದ ಊರನ್ನೂ ಇಬ್ಭಾಗ ಮಾಡುತ್ತಿದ್ದ ನದಿ. ಒಳ್ಳೆ ಮಳೆಯ ಕಾಲದಲ್ಲಿ ನದಿ ನೆರೆಯುಕ್ಕಿ ನಮ್ಮನ್ನು ಬೆಸೆಯುತ್ತಿದ್ದ ಸೇತುವೆಯನ್ನು ನುಂಗಿಹಾಕಿ ನಮ್ಮನ್ನು ಊರಿಂದ ಹೊರಗೆ ಕಾಲಿರಿಸದಂತೆ ಮಾಡುತ್ತಿತ್ತು. ಇನ್ನು ನಮ್ಮೂರಿನ ಕೊನೆಯೆಂದರೆ ಅದು ಮಾಡುಬೆಟ್ಟ. ಮಾಡುಬೆಟ್ಟದಿಂದ ಆಚೆಗೆ ಏನಿದೆ ಎಂದು ನಮಗಂತೂ ಗೊತ್ತಿರಲಿಲ್ಲ. ಮಾಡುಬೆಟ್ಟದ ಕಾಡನ್ನು ಹಾಗೆ ಎಲ್ಲರಿಂದಲೂ ಹೊಕ್ಕು ಬರುವುದಾಗಲೀ, ಇಲ್ಲ ಅತ್ತ ಕಡೆಗೆ ಹೋಗಿ ಇಳಿಯುವುದಾಗಲೀ ಏನೂ ಮಾಡಲಾಗುತ್ತಿರಲಿಲ್ಲ. ಆದರೆ ಬೆಟ್ಟ ಹತ್ತಿ ಅತ್ತ ಇಳಿದರೆ ಅರಬ್ಬೀ ಸಮುದ್ರ ಸಿಗುತ್ತದೆ ಎಂದು ಚಿಕ್ಕಂದಿನಲ್ಲಿ ನಮಗೆ ದೊಡ್ಡವರು ಹೇಳುವುದನ್ನ ಕೇಳಿ ತಿಳಿದಿತ್ತು. ಹೆಚ್ಚೆಂದರೆ ಬೆಟ್ಟದ ಅಂಚಿನಲ್ಲಿ ಕಾಡುಜೇನು ಕುಯ್ಯಲು ಹೋಗುವವರನ್ನು ನಾವು ಕಾಣುತ್ತಿದ್ದೆವು. ರಾತ್ರಿಗಳಲ್ಲಿ ಅಲ್ಲಿಂದ ನಾಟಾ ಹೊಡೆಯುವುದು, ಬೇಟೆಯಾಡುವುದು, ಗಾಂಜಾ ಬಿತ್ತುವುದು ಇಂಥ ಅನೇಕ ಅಕ್ರಮ ಚಟುವಟಿಕೆಗಳು ನಡೆಯುತ್ತವೆ ಎಂಬ